ಮಹಾರಾಜರು ಆ ಹೆಬ್ಬಾವನ್ನು ಹಿಡಿದು ತರಿಸಿ ಒಂದು ಬೂರಗದ ಮರಕ್ಕೆ ಕಟ್ಟಿ ಹಾಕಿದ್ದರಂತೆ. ದನ ಕುರಿಗಳನ್ನಾದರೆ ಮರಕ್ಕೆ ಕಟ್ಟ ಬಹುದು; ಹೆಬ್ಬಾವನ್ನು ಹೇಗೆ ಮರಕ್ಕೆ ಕಟ್ಟಿ ಹಾಕಲು ಸಾಧ್ಯ ಎಂದು ಕೇಳಿದೆ. "ಇಲ್ಲಾಸ್ವಾಮಿ ಅದು ಇಷ್ಟು ಗಾತ್ರ ಇತ್ತು" ಎಂದು ಎರಡೂ ಕೈಗಳ ಅಳತೆಯಲ್ಲಿ ತೋರಿದಳು, ಮಸಣಮ್ಮನ ಮಗಳು ಆಗ ಸಣ್ಣ ಹುಡುಗಿಯಂತೆ; ಅವಳೂ ಮರಕ್ಕೆ ಕಟ್ಟಿದ್ದ ಹೆಬ್ಬಾವನ್ನು ನೋಡಿರುವುದಾಗಿ ಘಟನೆಯನ್ನು ಖಚಿತ ಪಡಿಸಿದಳು. ಈ ಬೃಹತ್ ಗಾತ್ರದ ಹೆಬ್ಬಾವನ್ನು ಮೈಸೂರು ಮೃಗಾಲಯಕ್ಕೆ ಕಳುಹಿಸಿದರಂತೆ. ಸಾಕಷ್ಟು ಜಿಂಕೆಗಳನ್ನೂ ಹಿಡಿದು ಮೃಗಾಲಯಕ್ಕೆ ಕಳುಹಿಸಿದ ಬಗ್ಗೆ ಮಸಣಮ್ಮನಿಗೆ ನೆನಪಿದೆ.

ಮಸಣಮ್ಮ ಮತ್ತು ಅವಳ ಮಕ್ಕಳು ಹೇಳುತ್ತಿದ್ದ ವಿಷಯಗಳಲ್ಲಿ ಕೊಂಚವೂ ಉತ್ಪ್ರೇಕ್ಷೆ ಇರುತ್ತಿರಲಿಲ್ಲ. ಸೋಲಿಗರಿಗೆ ಯಾವುದನ್ನೂ ಉತ್ಪ್ರೇಕ್ಷೆ ಮಾಡಿ ಹೇಳುವ ಅಗತ್ಯವೇ ಬರುವುದಿಲ್ಲ. ಇದೇ ಬಗೆಯ ಘಟನೆಗಳನ್ನು ನಗರ ವಾಸಿಗಳ ಬಾಯಲ್ಲಿ ಕೇಳಿದ್ದರೆ ಪ್ರತಿಯೊಂದಕ್ಕೂ ಮಸಾಲೆ – ಒಗ್ಗರಣೆಗಳು ಬಿದ್ದು ಸುಳ್ಳಿನ ಕಂತೆಯೇ ಆಗಿಬಿಡುತ್ತಿತ್ತು. ಆ ಕಾಲದಲ್ಲಿ ತುಪಾಕಿ ಸೋಲಿಗರ ಗ್ರಹಿಕೆಗೆ ಎಂದೂ ದಕ್ಕದ ವಿಸ್ಮಯವಾಗಿತ್ತು. ಆದರೆ ಅವರ ಬಗ್ಗೆ ಉತ್ಪ್ರೇಕ್ಷಿತ ಕಥೆಗಳು ಹುಟ್ಟಲಿಲ್ಲ. ತುಪಾಕಿಯ ಸದ್ದು ಮತ್ತು ಅದರ ರಕ್ತ ಚಲ್ಲಾಡುವ ಶಕ್ತಿ ಸೋಲಿಗರನ್ನು ಭಯ ಭೀತರನ್ನಾಗಿ ಮಾಡುತ್ತಿದ್ದುದುಂಟು, ಆದರೆ ಮಹಾರಾಜರ ಕೈನ ತುಪಾಕಿ ಇಂತಹ ಯಾವ ಆತಂಕಕ್ಕೂ ಕಾರಣವಾಗಿರಲಿಲ್ಲ. ಮಹಾರಾಜರು ತಮ್ಮ ಮಗ (ಶ್ರೀಕಂಠದತ್ತ ಒಡೆಯರ್) ಬಾಲಕನಾಗಿದ್ದಾಗ ಜೊತೆಯಲ್ಲಿ ಕರೆ ತಂದಿದ್ದರಂತೆ. ಬಂಗಲೆ ಎದುರು ಅವರಿಗೆ ಕೋವಿಕೊಟ್ಟು ಗುರಿ ಇಟ್ಟು ಗುಂಡು ಹೊಡೆಯುವುದನ್ನು ಹೇಳಿ ಕೊಡುತ್ತಿದ್ದರಂತೆ. ರಾಜಕುಮಾರ ಹೊಡೆದ ಗುಂಡು ನೀಲಗಿರಿ ಮರಕ್ಕೆ ಬಿದ್ದು ಮರ ಬಾಯಿ ಬಿಟ್ಟಿದ್ದನ್ನು ಮಸಣಮ್ಮ ನೆನೆಯುತ್ತಾಳೆ. ಮಸಣಮ್ಮನ ಮಗಳು "ಬನ್ನೀಸ್ವಾಮಿ ಈಗಲೂ ಬಂಗ್ಲೆ ಎದುರಿನ ನೀಲಗಿರಿ ಮರದ ಮೇಲೇ ಆ ಗುರುತು ಹಾಗೇ ಇದೆ; ಬೇಕಾದರೆ ನಿಮಗೂ ತೋರಿಸ್ತೀನಿ" ಎಂದು ಘಟನೆಯನ್ನು ಖಚಿತ ಪಡಿಸಿದಳು.

ಹನ್ನೆರಡೂವರೆ ರೂಪಾಯಿ ಸಂಬಳಕ್ಕೆ ಸೇರಿದ್ದ ಬಂಗಲಿ ರಂಗೇಗೌಡನಿಗೆ ರಿಟೈರ್ ಆಗುವ ವೇಳೆಗೆ ಏಳುನೂರು ರೂಪಾಯಿ ಸಂಬಳ ಬರುತ್ತಿತ್ತಂತೆ. ಗುಡಿ ಹಟ್ಟಿಯ ಸೋಲಿಗರಾರು ಇಷ್ಟೊಂದು ಹಣ ಕಂಡಿದ್ದೇ ಇಲ್ಲ. ಸೋಲಿಗರಿಗೆ ಹಣ ಕೂಡಿಟ್ಟು ನಾಳೆಗೆ – ಮುಂದಕ್ಕೆ ಬಳಸಬೇಕೆಂಬ ಕಲ್ಪನೆಯೇ ಇಲ್ಲ. ಹಣವಷ್ಟೇ ಏಕೆ ತಾವು ಬೆಳೆದ ರಾಗಿ ಅಥವ ಎಡ್ಡ ಮುಂತಾದ ಧಾನ್ಯಗಳನ್ನಾಗಲಿ, ಕಾಳುಗಳನ್ನಾಗಲಿ ಸಂರಕ್ಷಿಸಿ ಇಟ್ಟು ಮುಂದಕ್ಕೆ ಉಪಯೋಗಿಸಬೇಕೆಂಬ ಕಲ್ಪನೆಯೇ ಇರಲಿಲ್ಲ. ಒಕ್ಕಣೆ ಮಾಡಿದ ಕೆಲವೇ ದಿನಗಳಲ್ಲಿ ಬೆಳೆದದ್ದನ್ನೆಲ್ಲ ತಮ್ಮ ನೆಂಟರಿಷ್ಟರಿಗೆಲ್ಲಾ ಹಂಚಿ ಮುಗಿಸಿ ಬಿಡುತ್ತಿದ್ದರು. ಬಂಗಲಿ ರಂಗೇಗೌಡನೂ ತನಗೆ ಸಂಬಳ ಬಂದದ್ದೇ ತಡ ಯಥೇಚ್ಛವಾಗಿ ಅಕ್ಕಿಯನ್ನು ಕೊಂಡು ತಂದು ತನ್ನ ಪೋಡಿನಲ್ಲಿರುವ ಎಲ್ಲಾ ಸೋಲಿಗ ಬಾಂಧವರಿಗೂ ಹೊಟ್ಟೆ ತುಂಬುವಷ್ಟು ಅನ್ನ ಮಾಡಿ ಹಾಕುತ್ತಿದ್ದನಂತೆ. ಆ ದಿನಗಳನ್ನು ಬಹಳ ಹೆಮ್ಮೆಯಿಂದ ನೆನೆದ ಮಸಣಮ್ಮ ಅನ್ನದ ಹಬ್ಬವನ್ನು ಸಂಭ್ರಮದಿಂದ ನೆನೆಸಿಕೊಂಡಳು. ಹೀಗೆ ಅನ್ನ ಮಾಡಲು ಅಕ್ಕಿಯನ್ನು ತರಬೇಕಾದರೆ ಕನಿಷ್ಠ ಹದಿನೈದು–ಇಪ್ಪತ್ತು ಮೈಲಿ ನಡೆದು ಯಳಂದೂರಿಗೋ ಅಥವ ನಲ್ಲೂರಿಗೋ ಹೋಗಿ ಬರಬೇಕಾಗಿತ್ತು. ಆದರೆ ಈಗ ಕಾಲ ಬದಲಾಗಿದೆ. ಸಾಕಷ್ಟು ಬಸ್ಸುಗಳು ಓಡಾಡುತ್ತವೆ. ಸೋಲಿಗರೂ ತಮಗೆ ಬೇಕಾದದ್ದನ್ನು ಶೇಖರಿಸಿಟ್ಟುಕೊಳ್ಳುವುದನ್ನು ಕಲಿತಿದ್ದಾರೆ.

ಕೇತೇದೇವರ ಗುಡಿಯ ಬಗ್ಗೆ ಮಾತು ಪ್ರಾರಂಭವಾಯಿತು. ವಾಸ್ತವವಾಗಿ ಕೇತೇದೇವರು ಎಂದು ಕರೆಯಲಾಗುವ ಈ ವಿಗ್ರಹ ಒಂದು ಸಾಧಾರಣ ವೀರಗಲ್ಲು. ಇದು ಸೋಲಿಗನೊಬ್ಬನಿಗೆ ಹೇಗೋ ದೊರೆತು, ತನಗೆ ಸಿಕ್ಕ ಈ ಅದ್ಭುತ ವಸ್ತು ಸಾಕ್ಷಾತ್ ಕೇತೇದೇವರು ಎಂದು ಭಾವಿಸಿ ಸುದ್ದಿಯನ್ನು